ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಪಾಂಡವಪುರ

ಸಿ.ಸಿ. ನಂ: 775/2021 ಸಿ.ಡಬ್ಲ್ಯೂ: **23** ಪಿ.ಡಬ್ಲ್ಯೂ: **9**

ಸಾಕ್ಷಿದಾರರ ಹೇಳಿಕೆಗಳು **-**

ಸಾಕ್ಷಿಯ ಹೆಸರು - ಕೆ. ಪ್ರಭಾಕರ್

ತಂದೆಯ ಹೆಸರು - ಕೃಷ್ಣಾಚಾರಿ

ವಯಸ್ಸು - 61 ವರ್ಷ

ಉದ್ಯೋಗ - ನಿವೃತ ಪೊಲೀಸ್ ನಿರೀಕ್ಷಕರು

ವಾಸ ಸ್ಥಳ - ಮೈಸೂರು

ದಿನಾಂಕ: 06-06-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆ ಮಾನ್ಯ ಎಪಿಪಿಯವರಿಂದ:</u>

ನಾನು ದಿನಾಂಕ 20.06.2020 ರಿಂದ 13.08.2022 ರವರೆಗೆ ಪಾಂಡವಪುರ ವೃತ್ತದಲ್ಲಿ ನೀರಿಕ್ಷಕರಾಗಿ ಕೆಲಸ ನಿರ್ವಹಿಸಿರುತ್ತೇನೆ. ಈ ಪ್ರಕರಣದ ಕಡತವನ್ನು ಚಾಸ 22 ರವರಿಂದ 24.09.2021 ರಂದು ಪಡೆದು ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ಕಡತ ಪರಿಶೀಲಿಸಿದಾಗ ಆರೋಪಿಯ ವಿರುದ್ಧ ಚಾಸಾ -13 ರವರು ಈಗಾಗಲೇ ದೋಷರೋಪಣೆ ಪಟ್ಟಿಯನ್ನು ಕಲಂ 279 338, ಐ.ಪಿ.ಸಿ ರಡಿಯಲ್ಲಿ ಸಲ್ಲಿಸಿದ್ದು, ಸದರಿ ಅಂತಿಮ ವರದಿ ಆಧಾರದ ಮೇಲೆ ಪ್ರಕರಣ ಸಿ.ಸಿ 775/2021 ಎಂದು ದಾಖಲಾಗಿದದ್ದು ಅದರಲ್ಲಿ ಆರೋಪಿ ತಪ್ಪು ಒಪ್ಪಿಕೊಂಡು ಅವರನ್ನು ದೋಷಿಯನ್ನಾಗಿ ನ್ಯಾಯಾಲಯ ದಿನಾಂಕ 14.09.2021 ರಂದು ಪರಿಗಣಿಸಿ ಅವರ ಮೇಲೆ ರೂ.1600 ದಂಡದ ಶಿಕ್ಷೆಯನ್ನು ವಿಧಿಸಿರುತ್ತದೆ . ಅದನ್ನು ಆರೋಪಿ ಪಾವತಿಸಿರುತ್ತಾರೆ.

ದಿನಾಂಕ 24.09.2021 ರಂದು ಗಾಯಾಳು ನಾಗೇಶ್ ಬಿನ್ ಕೆಂಪರಾಜು ಅಪಘಾತದಲ್ಲಿ ಅನುಭವಿಸಿದ ಗಾಯಗಳಿಂದ ಮೃತಪಟ್ಟಿರುವುದಾಗಿ ಭಾನವಿ ಆಸ್ಪತ್ರೆ, ಮೈಸೂರು ರವರಿಂದ ನಮ್ಮ ಠಾಣೆಗೆ ಪತ್ರ ಸಂದೇಶ ಬಂದಿದ್ದು , ಅದನ್ನು ನಾನು ಸ್ವೀಕರಿಸಿರುತ್ತೇನೆ. ಈ ಕುರಿತಾಗಿ ತನಿಖೆ ಮಾಡಿ ವರದಿ ನೀಡಲು ಚಾಸಾ 22 ರವರನ್ನು ನೇಮಿಸಿ ಅವರ ಮೂಲಕ ನ್ಯಾಯಾಲಯದಿಂದ ಅನುಮತಿ ಪಡೆದಿರುತ್ತೇನೆ. ಚಾಸಾ -21 ರವರನ್ನು ಮೃತ ನಾಗೇಶನನ್ನು ಶವತನಿಖೆಗೆ ನೇಮಿಸಿರುತ್ತೇನೆ . ಸದರಿ ಚಾಸಾ -21 ಶವತನಿಖೆ ಪೂರ್ಣಗೊಳಿಸಿ ವರದಿಯನ್ನು ನನಗೆ ನೀಡಿರುತ್ತಾರೆ. ಸದರಿ ಚಾಸಾ-21 ರವರ ವರದಿಯನ್ನು ನಾನು ನೋಡುತ್ತಿದ್ದು ಅದನ್ನುನಿಪಿ 17 ರಿಂದ 23 ಎಂದು ಗುರುತಿಸಲಾಗಿದೆ.

ಸದರಿ ವರದಿಯಲ್ಲಿ ಶವತನಿಖಾ ವೇಳೆಯಲ್ಲಿ ಪ್ರಸ್ತುತ ಇದ್ದ ಮಹಜರ್ ಸಾಕ್ಷಿಗಳ ಹೇಳಿಕೆ ಹಾಗೂ ವೈದ್ಯರಿಗೆ ನಿವೇದನೆ, ಪೋಟೊಗ್ರಾಫ್ ಹಾಗೂ Inquest ವರದಿ ಪ್ರಸುತ್ತ ಇರುತ್ತದೆ. ದಿನಾಂಕ 08.11.2021 ರಂದು ವೈದ್ಯರು ಮೃತನ ಪಿ .ಎಂ ವರದಿಯನ್ನು ನೀಡಿರುತ್ತಾರೆ . ಅದನ್ನು ನಾನು ಈಗ ನೋಡುತ್ತಿದ್ದು ಅದನ್ನುನಿಪಿ 24 ಎಂದು ಗುರುತಿಸಲಾಗಿದೆ. ಅದೇ ದಿನ ಆರೋಪಿಗೆ ಕಲಂ 41 ಎ ರಡಿಯಲ್ಲಿ ನೋಟೀಸ್ ಜಾರಿ ಮಾಡಿರುತ್ತೇನೆ. ದಿನಾಂಕ 04.11.2021 ರಂದು ಮೃತನ ಸಾವು ಅಪಘಾತದಲ್ಲಿ ಆದ ಗಾಯಗಳಿಂದ ಆಗಿದೇಯೇ ಎಂದು ಸ್ಪಷ್ಟನೆ ಕೋರಿ ಚಾಸಾ 19 ರವರಿಗೆ ಪತ್ರ ಬರೆದು ಅವರು ನಿಪಿ 24 ರ ಪುಟ 4 ರಲ್ಲಿ ನಮೂದು ಮಾಡಿದಂತೆ ಸ್ಪಷ್ಟನೆ ನೀಡಿರುತ್ತಾರೆ . ಹಾಗಾಗೀ ಈಗಾಗಲೇ ಅಪಘಾತ ತನ್ನ ನಿರ್ಲಕ್ಷ್ಯದಿಂದಲೇ ಆಗಿದು ಎಂದುಆರೋಪಿ ಒಪ್ಪಿಕೊಂಡಿದ್ದ ಕಾರಣ ಹಾಗೂ ನಾಗೇಶ ಅಪಘಾತದಲ್ಲಿ ಆದ ಗಾಯಗಳಿಂದ ಮೃತಪಟ್ಟಿದ್ದು ಧೃಡವಾಗಿರುವ ಕಾರಣ ಆರೋಪಿ ವಿರುದ್ಧ ಕಲಂ 304ಎ ಅಡಿಯಲ್ಲಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೆನೆ. ಆರೋಪಿಯನ್ನು ನಾನು ನೋಡಿದರೆ ಗುರುತಿಸುವೆ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>

ಅಪಘಾತವು ದಿನಾಂಕ 11.04.2021 ರಂದು ಮಧ್ಯಾಹ್ನ 4.30 ಕ್ಕೆ ಆಗಿರುತ್ತದೆ. ನಾಗೇಶ ಮೃತ ಪಟ್ಟಿರುವ ದಿನಾಂಕ 24.09.2021. ನಾಗೇಶ್ ಅಪಘಾತದಲ್ಲಿ ಸಂಭವಿಸಿದ ಗಾಯಗಳ ಕಾರಣ ಮೃತಪಟಿಟರುವುದಿಲ್ಲಅವರು ಬೇರೆ ಕಾರಣಕ್ಕೆ ತೀರಿಕೊಂಡಿರುವರು ಎಂದರೆ ಸರಿಯಲ್ಲ. ನಾಗೇಶ್ ಶಾಶ್ವಕೋಶದ ಇನ್‌ಫೆಕ್ಷನ್ ನಿಂದ ತೀರಿಕೊಂಡಿರುವರು ಎಂದರೆ ಸರಿ, ಸಾಕ್ಷಿ ಮುಂದುವರೆದು ಅಪಘಾತದ ಗಾಯಗಳು ಆ ಖಾಯಿಲೆಯನ್ನು ಉಂಟು ಮಾಡಿರುತ್ತದೆ. ನಾಗೇಶ್ ರವರ ಶಾಶ್ವಕೋಶದ ಖಾಯಿಲೆ ಅಪಘಾತದಲ್ಲಿ ಆದ ಗಾಯಗಳಿಂದ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ನಾಗೇಶ್ ರವರು ಧೂಮಪಾನ ಹಾಗೂ ತಂಬಾಕು ಸೇವನೆ ಕಾರಣಕ್ಕೆ ಶಾಶ್ವಕೋಶದ ಖಾಯಿಲೆ ಬಂದಿರುವುದು ಅಪಘಾತದ ಗಾಯಗಳಿಂದ ಅಲ್ಲ ಎಂದರೆ ಸರಿಯಲ್ಲ. ನಾಗೇಶ್ ರವರ ಕುಟುಂಬಕ್ಕೆ ಪರಿಹಾರ ಕೊಡಿಸಿಕೊಡಲು ಆರೋಪಿಯ ವಿರುದ್ಧ ಸುಳ್ಳು ವರದಿ ನೀಡಿ ಸುಳ್ಳು ಪ್ರಕರಣ ದಾಖಲಿಸಿರುವಿರಿ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

**II** ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್ .ಸಿ
ಪಾಂಡವಪುರ